ನಾವು ಬಿಡುಗಡೆ ಮಾಡಿದ್ದೇವೆ. ನಾನು ಆ ವಿವರಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಆದರೆ ಆ Contingency Head ನಲ್ಲಿ ಮಾಡಿರಲಿಲ್ಲ. ಆದರೆ ಉಳಿದ task forse ನಲ್ಲಾಗಲಿ, NRWDP ಯಲ್ಲಾಗಲಿ ಏನು ಹೆಚ್ಚುವರಿಯಾಗಿರತಕ್ಕಂಥ ಹಣವನ್ನು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿದ್ದೇವೆ. ಈಗ ಏನು ಅತ್ಯಂತ ಅಗತ್ಯವಾಗಿದೆಯೋ ಆ ಅಗತ್ಯವಾಗಿರತಕ್ಕಂಥ ಹಣ ಬಿಡುಗಡೆ ಮಾಡುವುದಕ್ಕೆ ಎಲ್ಲ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: OK, ಮುಂದಿನ ಪ್ರಶ್ನೆ ತನ್ವೀರ್‌ಸೇಠ್‌ರದು, ಬಂದಿಲ್ಲ, ಮುಂದಿನ ಪ್ರಶ್ನೆ ಯಶವಂತರಾಯಗೌಡರದ್ದು ಇದೆ. ಯಶವಂತರಾಯಗೌಡ್ರೆ, ನಿಮ್ಮ ಪ್ರಶ್ನೆ ವರ್ಗಾವಣೆಯಾಗಿದೆ. ನಾಳೆ ನಿಮ್ಮ ಪ್ರಶ್ನೆಯನ್ನು ಹಾಕಿಕೊಳ್ಳುತ್ತೇವೆ. ಮುಂದಿನ ಪ್ರಶ್ನೆ ಅಜಯ್‌ಸಿಂಗ್‌ರವರದ್ದು ಇದೆ. ಪ್ರಶ್ನೆ ಕೇಳಿ.

ಕುಡಿಯುವ ನೀರಿಗಾಗಿ ಬಿಡುಗಡೆಯಾದ ಅನುದಾನ

189(2751); ಡಾ॥ ಅಜಯ್‌ಸಿಂಗ್ (ಜೇವರ್ಗಿ)

ಅ) 2014–15ನೇ ಸಾಲಿಗೆ ಗುಲ್ಬರ್ಗಾ ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು (ತಾಲ್ಲೂಕುವಾರು ವಿವರ ನೀಡುವುದು);

ಆ) ಬಿಡುಗಡೆಯಾದ ತಾಲ್ಲೂಕುವಾರು ಅನುದಾನದಲ್ಲಿ ಶೇಕಡಾವಾರು ವೆಚ್ಚ ಎಷ್ಟು ಲ್ಯಾಪ್ಸ್ (ವ್ಯಪಗತ) ಆದ ಅನುದಾನ ಎಷ್ಟು;

ಇ) 2015–16ನೇ ಸಾಲಿಗೆ ತಾಲ್ಲೂಕುವಾರು ಮುಂದುವರಿದ ಕಾಮಗಾರಿಗಳಿಗೆ ಬೇಕಾದ ಅನುದಾನ ಎಷ್ಟು;

ಈ) 2014–15ನೇ ಸಾಲಿಗೆ ಜೇವರ್ಗಿ ತಾಲ್ಲೂಕಿಗೆ ಅನುಮೋದಿಸಿದ ಕ್ರಿಯಾ ಯೋಜನೆ ಮೊತ್ತ ಎಷ್ಟು; ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ, ಕಾಮಗಾರಿಗಳು ಪೂರ್ಣಗೊಳ್ಳದಿರಲು ಕಾರಣವೇನು;

ಉ) ಶೇ 70–80 ರಷ್ಟು ಕಾಮಗಾರಿಗಳು ಮುಂದುವರಿದ ಕಾಮಗಾರಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾ. ಪಂಚಾಯತ್ ರಾಜ್ ಸಚಿವರು)

ಅ) 2014–15ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ರೂ. 1357.62 ಲಕ್ಷಗಳು ಹಾಗೂ ರಾಜ್ಯ ಸರ್ಕಾರದಿಂದ ರೂ. 4327.98 ಲಕ್ಷಗಳು ಬಿಡುಗಡೆಯಾಗಿದ್ದು, ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ತಾಲ್ಲೂಕುವಾರು ಬಿಡುಗಡೆಯಾದ ಅನುದಾನದ ಶೇಕಡಾವಾರು ವೆಚ್ಚವನ್ನು ಅನುಬಂಧದಲ್ಲಿ ನೀಡಿದೆ.

ಬಿಡುಗಡೆಯಾದ ಅನುದಾನದಲ್ಲಿ ಯಾವುದೇ ಹಣ ಲ್ಯಾಪ್ಸ್ ಆಗದೆ 2015–16ನೇ ಸಾಲಿಗೆ ಮುಂದುವರೆಯುತ್ತದೆ.

ಇ) 2015–16ನೇ ಸಾಲಿಗೆ ತಾಲ್ಲೂಕುವಾರು ಮುಂದುವರಿದ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಜೇವರ್ಗಿ ತಾಲ್ಲೂಕಿಗೆ 2014–15ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ರೂ. 1609.22 ಲಕ್ಷ ಅಂದಾಜಿನಲ್ಲಿ 247 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಈ ಪೈಕಿ 148 ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹೊಸದಾಗಿ ಸೃಜನೆಯಾಗಿದ್ದು, ಸಿಬ್ಬಂದಿ ಕೊರತೆಯಿಂದ ಹಾಗೂ ಟೆಂಡರ್ ಪ್ರಕ್ರಿಯೆಗೆ E-Procurement ಇಲಾಖೆಯಿಂದ Digital Key ದೊರಕುವಲ್ಲಿ ವಿಳಂಬವಾದ ಕಾರಣದಿಂದ ಮತ್ತು ಗುತ್ತಿಗೆದಾರರ ಲೈಸೆನ್ಸ್ ನವೀಕರಣ ಬ್ಲಾಕ್ ಅವಧಿ 2014ಕ್ಕೆ ಮುಗಿದಿದ್ದು, ಬ್ಲಾಕ್ ಅವಧಿ 2015–16 ಅವಧಿಗೆ ಗುತ್ತಿಗೆ ನವೀಕರಣ ಮಾಡಬೇಕಾಗಿದ್ದು, ಗುತ್ತಿಗೆ ನವೀಕರಣದಲ್ಲಿ ವಿಳಂಬವಾಗಿರುವುದರಿಂದ ಉಳಿದ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.

ಉ) ಜೇವರ್ಗಿ ತಾಲ್ಲೂಕಿನಲ್ಲಿ ಒಟ್ಟು 247 ಕಾಮಗಾರಿಗಳ ಪೈಕಿ 148 ಕಾಮಗಾರಿಗಳು ಪೂರ್ಣಗೊಂಡಿದ್ದು ಶೇ.60ರಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಇದರಲ್ಲಿ ಶೇ.40 ರಷ್ಟು ಕಾಮಗಾರಿಗಳು ಮುಂದುವರೆದ ಕಾಮಗಾರಿಗಾಳಾಗಿದ್ದು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2751 ರ ಲಗತ್ತು ಅನುಬಂಧ

NRDWP ACTION PLAN 2014-15
(SPILL + FRESH WORKS)

SL. NO	Taluk	Total works	Allocation			No of Works Completed	Grant Release During 2014-15 (Including OB)			Expenditure During 2014-15			% Expenditure	No of Spill over Balance works for 2015-16	Spill over Grant Required for 2015-16
			GOI	GOK	TOTAL		Central	State	Total	Central	State	Total			
1	2	3	4	5	6	7	8	9	10	11	12	13	14	16	17
1	Afzalpur	187	323.73	1277.78	1601.51	116	274.029	873.58	1147.61	225.325	916.01	1141.33	99.45	71	936.11
2	Aland	352	691.5	1545.57	2237.07	168	278.704	888.49	1167.19	229.19	931.72	1160.91	99.46	184	1005.40
3	Chincholi	218	559.12	1519.95	2079.07	116	80.1711	255.58	335.75	65.045	264.43	329.47	98.13	102	1027.53
4	Chittapur	302	750.62	1320.37	2070.99	150	143.245	456.65	599.90	117.194	476.43	593.62	98.95	154	1383.87
5	Gulbarga	389	691.7	1472.57	2164.27	237	271.445	865.34	1136.79	223.189	907.32	1130.51	99.45	152	1198.03
6	Jewargi	247	547.21	1062.01	1609.22	148	205.439	654.92	860.36	168.615	685.46	854.08	99.27	99	1131.66
7	Sedam	260	569.05	972.05	1541.1	151	104.587	333.41	438.00	85.2315	346.49	431.72	98.57	107	875.75
Grand Total		1955	4132.93	9170.3	13303.23	1086	1357.62	4327.98	5685.60	1113.79	4527.85	5641.64	99.23	869	7558.35

ಡಾ॥ ಅಜಯ್‌ಸಿಂಗ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಯಾವುದೇ lapse ಆಗದೆ 2015–16 ನೇ ಸಾಲಿಗೆ ಮುಂದುವರೆಯುತ್ತದೆಂದು ಅವರು ಹೇಳಿದ್ದಾರೆ. ವಿಶೇಷವಾಗಿ ಜೇವರ್ಗಿ ತಾಲ್ಲೂಕಿನಲ್ಲಿ 2014–15 ರಲ್ಲಿ total allocation ಇದ್ದದ್ದು 16.9 ಕೋಟಿ ರೂ.ಗಳು. ಆದರೆ grant release ಆಗಿದ್ದು ಕೇವಲ 8.60 ಕೋಟಿ ರೂ.ಗಳು, ಕೇವಲ 50% ಮಾತ್ರ ಹಣ ಬಿಡುಗಡೆಯಾಗಿದೆ, ಇನ್ನು 7.5 ಕೋಟಿ ರೂ.ಗಳ shortfall ಇದೆ. 2015–16 ರಲ್ಲಿ ಸುಮಾರು spill over works ಗೋಸ್ಕರ 11.30 ಕೋಟಿ ರೂ.ಗಳು ಬೇಕಾಗುತ್ತದೆ. ಆದರೆ ನಾವು ಈ ವರ್ಷ IPCD ಮುಖಾಂತರ ಇನ್ನು ಸುಮಾರು 19 ಕೋಟಿ ರೂ.ಗಳು ಬೇಕಾಗುತ್ತದೆ. ಅದಕ್ಕಾಗಿ spillover works 11 ಕೋಟಿ ಇರುವುದರಿಂದ ನಮಗೆ ಇನ್ನೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಜೇವರ್ಗಿಯಲ್ಲಿ ಕೆಲಸಗಳು ಪೂರ್ಣಗೊಳ್ಳುವುದು ಬಹಳ ವಿಳಂವಾಗಬಹುದು. ಈ ಕಾಮಗಾರಿಗಳ ಪ್ರಗತಿ ನೋಡಿಕೊಂಡು ಹಣ ಬಿಡುಗಡೆ ಮಾಡಿದ್ದಾರೆ. ಶೇ. 60 ರಷ್ಟು ಕಾಮಗಾರಿಗಳು ಮಾತ್ರ ಆ ವರ್ಷದಲ್ಲಿ ಪೂರ್ಣವಾಗಿರುವುದು ನಮಗೆ ಕಂಡುಬಂದಿದೆ. ಆ ಕಾಮಗಾರಿಗಳು ಮುಗಿದಾಗ ಯಾವುದೇ ರೀತಿಯಾಗಿ ತೊಂದರೆಯಾಗದಂತೆ ಹಣವನ್ನು ಬಿಡುಗಡೆ ಮಾಡುತ್ತೇವೆ.

ಡಾ॥ ಅಜಯ್‌ಸಿಂಗ್: ಮಾನ್ಯ ಅಧ್ಯಕ್ಷರೆ, Actually, total works ಇರುವುದು 247, complete ಆಗಿರುವುದು 148. ನಮ್ಮಲ್ಲಿರತಕ್ಕಂಥ ಸಿಬ್ಬಂದಿಗಳೆಂದರೆ, ಅವಶ್ಯಕತೆಯಿರುವುದು 6 sanction ಆಗಿರುವುದು 6. ಆದರೆ ಕೇವಲ ಮೂರು ಹುದ್ದೆಗಳು ಮಾತ್ರ ಭರ್ತಿ ಮಾಡಿದ್ದಾರೆ. ದಯವಿಟ್ಟು ಇನ್ನು ಉಳಿದಿರುವ ಮೂರು ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ವಿಶೇಷವಾಗಿ ತಾವು ತಮ್ಮ ಉತ್ತರದಲ್ಲಿಯೂ ಸಹ ಹೇಳಿದ್ದೀರಿ. Multi Village Water Scheme ಎಂದು ಹಿಂದೆ 6th March ನಲ್ಲಿ STA ಮುಖಾಂತರ . . .

ಅಧ್ಯಕ್ಷರು: ಮಾನ್ಯ ಸದಸ್ಯರೆ, ನಿಮ್ಮ ಮೂಲ ಪ್ರಶ್ನೆಯಲ್ಲಿ ಆ ಬಗ್ಗೆ ಕೇಳಿಲ್ಲ. ಇದರ ಬಗ್ಗೆ ಪ್ರತ್ಯೇಕವಾಗಿ ಕೇಳಿ. ಅವರು ಅದಕ್ಕೆ ಉತ್ತರವನ್ನು ಹೇಳುತ್ತಾರೆ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ನನ್ನನ್ನು ಭೇಟಿಯಾದಾಗ ಕೇಳಿದ್ದನ್ನು ಇಲ್ಲಿ ಕೂಡಿಸಿಕೊಂಡು ಕೇಳಿದ್ದಾರಷ್ಟೆ. ಆ MVS Scheme ಅನ್ನು ಬೇಗ ತೆಗೆದುಕೊಳ್ಳೋಣ. ಆದರೆ ಈಗ ಅವರು ಕೇಳಿರುವುದಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಅಲ್ಲಿ ಇಂಜಿನಿಯರ್ ಕೊರೆತೆಯಿರುವುದು ಸತ್ಯ. ಈಗಾಗಲೇ ನಾವು 460 ಜೂನಿಯರ್ ಇಂಜಿನಿಯರ್‌ಗಳ ಹುದ್ದೆಗೆ recruit ಮಾಡಿದ್ದೇವೆ. ಈಗ ಅವರುಗಳು ಟ್ರೈನಿಂಗ್‌ನಲ್ಲಿದ್ದಾರೆ. ಇನ್ನು 20 ದಿವಸಗಳಲ್ಲಿ ಅವರ ಟ್ರೈನಿಂಗ್ ಕಂಪ್ಲೀಟ್ ಆಗುತ್ತದೆ. ಆದಷ್ಟು ಬೇಗ ಇಂಜಿನಿಯರ್‌ರವರನ್ನು ಅವರಿಗೆ ಕೊಡುತ್ತೇವೆ.

ಡಾ॥ ಅಜಯ್‌ಸಿಂಗ್: Scrutiny committee ಕೆಲಸವಾಗಿದೆ. ಆದುದರಿಂದ ಈಗ technical committee ಯಲ್ಲಿ ಇರಿಸಿ clear ಮಾಡಿದರೆ ಅನುಕೂಲವಾಗುತ್ತದೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು MVS ಬಗ್ಗೆ ಕೇಳುತ್ತಿದ್ದಾರೆ. ಅದು ಇದಕ್ಕೆ ಸಂಬಂಧವಿಲ್ಲ.

ಅಧ್ಯಕ್ಷರು: ಅದರ ಬಗ್ಗೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಹೆಚ್.ಕೆ. ಪಾಟೀಲ್: ಆ technical committee ಯಲ್ಲಿ ಏನು clear ಆಗಿದೆಯೋ ಅದು next process ಗೆ ಬರುತ್ತದೆ. ಆದಷ್ಟು ಬೇಗ ಮಾಡಿಕೊಡುವುದಕ್ಕೆ, ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: OK, ಮುಂದಿನ ಪ್ರಶ್ನೆ ಕೆ.ಜಿ. ಬೋಪಯ್ಯನವರದ್ದು, ಪ್ರಶ್ನೆ ಕೇಳಿ.